# ಬಯಲಾಟದಲ್ಲಿನ ಪ್ರಸ್ತುತ ಮಾರ್ಪಾಡುಗಳು

ಹುಲುಗಯ್ಯ ನಾಯಕರ್[1] & ಕೆ. ರಾಮಕೃಷ್ಣಯ್ಯ[2]

[1]ಸಂಶೋಧನಾ ವಿದ್ಯಾರ್ಥಿ, ಪ್ರದರ್ಶನ ಕಲಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

[2]ಪ್ರಾಧ್ಯಾಪಕರು, ಪ್ರದರ್ಶನ ಕಲಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**Received: 27-07-2023 ; Accepted: 01-08-2023 ; Published: 09-05-2024**

**DOI: https://doi.org/10.5281/zenodo.11162255**

## ABSTRACT:

ನಮ್ಮ ಕರ್ನಾಟಕದ ಜನಪದ ರಂಗಭೂಮಿಯಲ್ಲಿ ಬಯಲಾಟಕ್ಕೆ ಅತ್ಯಂತ ಪ್ರಮುಖವಾದ ಸ್ಥಾನವಿದೆ. ಬಯಲಾಟದ ರಂಗಸಜ್ಜಿಕೆಯನ್ನು ನೋಡುವುದಾದರೆ ಇದಕ್ಕೆ ಭವ್ಯವಾದ ರಂಗಮಂಟಪ ನಿರ್ಮಿಸುತ್ತಾರೆ. ರಂಗ ಮಂಟಪವನ್ನು ಅಟ್ಟದಂತೆ ನಿರ್ಮಿಸಿ ಮರದ ಹಲಗೆಗಳನ್ನು ಹಾಕುತ್ತಾರೆ. ಅದಕ್ಕಾಗಿಯೇ ಬಯಲಾಟವನ್ನು ಅಟ್ಟದಾಟವೆಂತಲೂ, ದೊಡ್ಡಾಟವೆಂತಲೂ ಕರೆಯುತ್ತಾರೆ. ರಂಗಮಂಟಪಕ್ಕೆ ಅಟ್ಟ, ಚಪ್ಪರ, ಹಂದರ ಎಂದು ಕರೆಯುತ್ತಾರೆ. ದೇವಸ್ಥಾನಗಳ ಮುಂದಿನ ವಿಶಾಲ ಸ್ಥಳದಲ್ಲಿ ಅಟ್ಟದ ನಿರ್ಮಾಣವಾಗುತ್ತದೆ. ಆಟಕ್ಕಿಂತ ಎರಡು ದಿನ ಮೊದಲು ಮಂಟಪ ನಿರ್ಮಾಣ ಕಾರ್ಯ ಪ್ರಾರಂಭವಾಗುತ್ತದೆ. ಬಯಲಾಟದ ಮೂಲವನ್ನು ಹುಡುಕುತ್ತಾ ಹೋದಾಗ ಅವು ಮೊದಲು ದೇವಸ್ಥಾನದ ಆಶ್ರಯದಲ್ಲಿ ಬೆಳೆದು ನಂತರ ಬೀದಿಗೆ ಬಂದು ಜನಸಾಮಾನ್ಯರ ಮತ್ತು ಊರಿನ ಹಿರಿಯರ ಆಶ್ರಯದಲ್ಲಿ ಬೆಳೆದು ಬಂದಿರುವುದನ್ನು ಅನೇಕ ವಿದ್ವಾಂಸರು ತಮ್ಮ ಸಂಶೋಧನೆಯ ಮೂಲಕ ಕಂಡುಕೊಂಡಿರುವುದನ್ನು ನೋಡಬಹುದಾಗಿದೆ. ದೇವಸ್ಥಾನದ ಆಶ್ರಯದಲ್ಲಿ ಬೆಳೆದ ಮಾತ್ರಕ್ಕೆ ಆ ಕಲೆಯು ಧಾರ್ಮಿಕವಾದುದ್ದಾಗಿರುತ್ತದೆ ಎಂಬುದನ್ನು ಸಂಶೋಧಕರು ಅಲ್ಲಗಳೆಯುತ್ತಾರೆ. ಹಿಂದಿನ ಕಾಲದಲ್ಲಿ ಸಮಾಜದ ಯಾವುದೇ ಚಟುವಟಿಕೆಗಳು ದೇವಸ್ಥಾನಗಳಲ್ಲಿ ಮೊದಲು ಪ್ರಾರಂಭವಾಗುತ್ತಿದ್ದವು. ಹಾಗೆ ಪ್ರಾರಂಭವಾದ ಪ್ರತಿ ಕಲೆಯು ಒಂದು ಧಾರ್ಮಿಕ ಶಿಸ್ತಿಗೆ ಒಳಪಟ್ಟು ಅಚ್ಚುಕಟ್ಟಾಗಿ ಬೆಳೆಸುವ ಧಾರ್ಮಿಕ ಶ್ರದ್ಧೆಯು ಜನರಲ್ಲಿ ಮೂಡುತ್ತಿತ್ತು. ನಮ್ಮ ಬಹಳಷ್ಟು ಬಯಲಾಟಗಳಿಗೆ ವಸ್ತುವಿನ ಆಯ್ಕೆ ನಡೆದಿದ್ದು ಪುರಾಣಗಳಿಂದ, ರಾಮಾಯಣ, ಮಹಾಭಾರತ, ಭಾಗವತ ಮುಂತಾಗಿ ಇಲ್ಲಿಯೂ ಯಾವುದೋ ಒಂದು ಗಂಭೀರ ತತ್ವದ ಪ್ರತಿಪಾದನೆಗಾಗಿ ಕೃತಿಕಾರ ವಸ್ತುವನ್ನು ಅಥವಾ ಕಥೆಯನ್ನು ಎತ್ತಿಕೊಳ್ಳುವುದಿಲ್ಲ. ಒಂದು ರೋಚಕ ಕಥೆಯ ನಿರೂಪಣೆ ಅಥವಾ ಒಂದು ಸರಳ ನೀತಿಯ ಪ್ರತಿಪಾದನೆ ಮಾತ್ರ ಇವನ ದೃಷ್ಟಿಯಲ್ಲಿ ಉಳಿಯುತ್ತದೆ. ಇಂದಿಗೂ ಯಕ್ಷಗಾನದ ಅನೇಕ ತಂಡಗಳು ತಮ್ಮ ಪೂರ್ವ ಪದ್ಧತಿಯಾದ ಧಾರ್ಮಿಕ ನೆಲೆಯ ಸಂಬಂಧವನ್ನು ಉಳಿಸಿಕೊಂಡು ಅದೇ ಮಾರ್ಗದಲ್ಲಿ ಬೆಳೆಸಿಕೊಂಡು ಬಂದಿರುವುದನ್ನು ನೋಡಬಹುದಾಗಿದೆ. ಮೂಡಲಪಾಯದ ಬಯಲಾಟ ಪ್ರಭೇದಗಳು ಎರಡು ಕಾರಣದಿಂದ ದೇವಸ್ಥಾನದ ನೆಲೆಯನ್ನು ಕಳೆದುಕೊಂಡವು

ಎಂಬುದಾಗಿ ವಿದ್ವಾಂಸರು ತಿಳಿಸುತ್ತಾರೆ. ಒಂದನೆಯದಾಗಿ ಉತ್ತರ ಕರ್ನಾಟಕದ ಕಡೆಗೆ ಬೀಸಿದ ಕಂಪನಿ ನಾಟಕಗಳ ಪ್ರಭಾವ. ಎರಡನೆಯದಾಗಿ ಬೆಂಗಳೂರು ಆಧುನಿಕ ವಿಜ್ಞಾನ ಸಾಂಸ್ಕೃತಿಕ ಮೂಲ ಮುಖ್ಯ ಪ್ರಸರಣ ಕೇಂದ್ರವಾಗಿ ರೂಪಗೊಂಡದ್ದು. ಬಯಲಾಟದ ಇತಿಹಾಸವು 150 ವರ್ಷಗಳಿಗಿಂತ ಹಿಂದೆ ಹೋಗುವುದಿಲ್ಲ. ಪ್ರಾರಂಭದಲ್ಲಿ ಪ್ರಚಲಿತವಿದ್ದ ಆಟಗಳಲ್ಲಿ ಹಾಡು ಮತ್ತು ಕುಣಿತಗಳ ಪ್ರಧಾನವಾಗಿದ್ದವು ಎಂದು ಕಂಡುಬರುತ್ತದೆ. ಬೈಲಹೊಂಗಲದ ದುರುದುಂಡೇಶ ಕವಿ ರಚಿಸಿದ 'ಪ್ರಭುದೇವ' ಹಾಗೂ 'ಕೃಷ್ಣಹರಣ' ಯಕ್ಷಗಾನ ಕೃತಿಗಳಲ್ಲಿ ನಡುನಡುವೆ ಲಿಖಿತ ಸಂಭಾಷಣೆಯಿದ್ದು ನಾಟಕೀಯ ರೂಪ ಎದ್ದು ಕಾಣುತ್ತದೆ. ಈಗ ಲಭ್ಯವಿರುವ ದೊಡ್ಡಾಟಗಳ ಕೃತಿಗಳಲ್ಲಿ 'ಕುಮಾರರಾಮ' ಪ್ರಾಚೀನವಾದ ದೊಡ್ಡಟದ ಕೃತಿಯಾಗಿದೆ. ಬಳ್ಳಾರಿಯಲ್ಲಿ 1900 ಸುಮಾರಿಗೆ ಪ್ರಕಟಗೊಂಡ ದೊಡ್ಡಾಟ ಕೃತಿಗಳು ಅಲ್ಲಲ್ಲಿ ಕಾಣಸಿಗುತ್ತವೆ. ದೊಡ್ಡಾಟಗಳು 19ನೇ ಶತಮಾನದ ಉತ್ತರಾರ್ಧದಲ್ಲಿ ಹೆಚ್ಚು ಜನಪ್ರಾಯವಾಗಿದ್ದವು ಎಂಬುದಕ್ಕೆ ಈ ಕೃತಿಗಳು ಕಾರಣವಾಗುತ್ತವೆ. ಈ ಪ್ರಕಟಣೆಯ ನಂತರ ಅನೇಕ ಕವಿಗಳು ದೊಡ್ಡಾಟವನ್ನು ರಚಿಸಿ ಮತ್ತಷ್ಟು ಜನಪ್ರಿಯಗೊಳಿಸಿದರು. ಹಸ್ತಪ್ರತಿಗಳು ಊರಿಂದ ಊರಿಗೆ ಸಂಚರಿಸಿದ್ದುರಿಂದ ಕವಿಯ ಹೆಸರನ್ನು ಗುರುತಿಸುವುದು ಕಷ್ಟದ ಕೆಲಸವಾಗಿದೆ ಎಂಬುದನ್ನು ವಿದ್ವಾಂಸರಿಲ್ಲಿ ವ್ಯಕ್ತಪಡಿಸುತ್ತಾರೆ. ಜನಪದ ರಂಗಭೂಮಿಯಲ್ಲಿ ಪ್ರಸಿದ್ಧಿ ಪಡೆದಿರುವಂತಹ ಈ ಬಯಲಾಟವು ಈಗ ಅತ್ಯಂತ ಕ್ಷೀಣವಾದ ಸ್ಥಿತಿಯಲ್ಲಿದೆ.

## KEYWORDS:

ದೊಡ್ಡಾಟಗಳು, ಹಸ್ತಪ್ರತಿಗಳು, ಕೃಷ್ಣಹರಣ.

ನಮ್ಮ ಕನಾರ್ಟಕದ ಜನಪದ ರಂಗಭೂಮಿಯಲ್ಲಿ ಬಯಲಾಟಕ್ಕೆ ಅತ್ಯಂತ ಪ್ರಮುಖವಾದ ಸ್ಥಾನವಿದೆ. ಈ ಬಯಲಾಟ ಜನಪದ ಕಲೆಗಳಲ್ಲಿ ಅತ್ಯಂತ ವೈವಿಧ್ಯದಿಂದ ಕೂಡಿದ ಗಂಡುಕಲೆ. ಇದರಲ್ಲಿ ಸಾಹಿತ್ಯ, ಸಂಗೀತ, ಕುಣಿತಗಳು ಪ್ರಧಾನವಾಗಿವೆ. ಪ್ರಾಚೀನ ಕಾಲದಿಂದಲೂ ಗ್ರಾಮೀಣರಿಗೆ ಮನರಂಜನೆ ಒದಗಿಸಿಕೊಂಡು ಬರುತ್ತಿರುವ ಹವ್ಯಾಸಿ ಕಲೆ ಈ ಬಯಲಾಟ. ಸಾಮಾನ್ಯವಾಗಿ ಸುಗ್ಗಿ ಕೆಲಸ ಮುಗಿದ ಮೇಲೆ 'ಬಯಲಾಟ'ಗಳ ಸುಗ್ಗಿ ಆರಂಭವಾಗುತ್ತದೆ. ಇದಕ್ಕೆ ಕಾರಣ ಕೆಲಸದ ಬಿಡುವು. ಬಯಲಾಟದ ರಂಗ ಮಂಟಪವನ್ನು ಅಟ್ಟದಂತೆ ನಿರ್ಮಿಸಿ ಮರದ ಹಲಗೆಗಳನ್ನು ಹಾಕುತ್ತಾರೆ. ಅದಕ್ಕಾಗಿಯೇ ಬಯಲಾಟವನ್ನು ಅಟ್ಟದಾಟವೆಂತಲೂ, ದೊಡ್ಡಾಟವೆಂತಲೂ ಕರೆಯುತ್ತಾರೆ. ರಂಗಮಂಟಪಕ್ಕೆ ಅಟ್ಟ, ಚಪ್ಪರ, ಹಂದರ ಎಂದು ಕರೆಯುತ್ತಾರೆ. ಬಯಲಾಟದ ಮೂಲವನ್ನು ಹುಡುಕುತ್ತಾ ಹೋದಾಗ ಅವು ಮೊದಲು ದೇವಸ್ಥಾನದ ಆಶ್ರಯದಲ್ಲಿ ಬೆಳೆದು ನಂತರ ಬೀದಿಗೆ ಬಂದು ಜನಸಾಮಾನ್ಯರ ಮತ್ತು ಊರಿನ ಹಿರಿಯರ ಆಶ್ರಯದಲ್ಲಿ

ಬಯಲಿಗೆ ಬಂದು ಬಯಲಾಟವಾಗಿ ಬೆಳೆದು ಬಂದಿರುವುದನ್ನು ಅನೇಕ ವಿದ್ವಾಂಸರು ತಮ್ಮ ಸಂಶೋಧನೆಯ ಮೂಲಕ ಕಂಡುಕೊಂಡಿರುವುದನ್ನು ನೋಡಬಹುದಾಗಿದೆ. ದೇವಸ್ಥಾನದ ಆಶ್ರಯದಲ್ಲಿ ಬೆಳೆದ ಮಾತ್ರಕ್ಕೆ ಆ ಕಲೆಯು ಧಾರ್ಮಿಕವಾದುದ್ದಾಗಿರುತ್ತದೆ ಎಂಬುದನ್ನು ಸಂಶೋಧಕರು ಅಲ್ಲಗಳುತ್ತಾರೆ. ಹಿಂದಿನ ಕಾಲದಲ್ಲಿ ಸಮಾಜದ ಯಾವುದೇ ಚಟುವಟಿಕೆಗಳು ದೇವಸ್ಥಾನಗಳಲ್ಲಿ ಮೊದಲು ಪ್ರಾರಂಭವಾಗುತ್ತಿದ್ದವು. ಹಾಗೆ ಪ್ರಾರಂಭವಾದ ಪ್ರತಿ ಕಲೆಯು ಒಂದು ಧಾರ್ಮಿಕ ಶಿಸ್ತಿಗೆ ಒಳಪಟ್ಟು ಅಚ್ಚುಕಟ್ಟಾಗಿ ಬೆಳೆಸುವ ಧಾರ್ಮಿಕ ಶ್ರದ್ಧೆಯು ಜನರಲ್ಲಿ ಮೂಡುತ್ತಿತ್ತು. ನಮ್ಮ ಬಹಳಷ್ಟು ಬಯಲಾಟಗಳಿಗೆ ವಸ್ತುವಿನ ಆಯ್ಕೆ ನಡೆದಿದ್ದು ಪುರಾಣಗಳಿಂದ, ರಾಮಾಯಣ, ಮಹಾಭಾರತ, ಭಾಗವತ ಮುಂತಾಗಿ ಇಲ್ಲಿಯೂ ಯಾವುದೋ ಒಂದು ಗಂಭೀರ ತತ್ವದ ಪ್ರತಿಪಾದನೆಗಾಗಿ ಕೃತಿಕಾರ ವಸ್ತುವನ್ನು ಅಥವಾ ಕಥೆಯನ್ನು ಎತ್ತಿಕೊಳ್ಳುವುದಿಲ್ಲ. ಒಂದು ರೋಚಕ ಕಥೆಯ ನಿರೂಪಣೆ ಅಥವಾ ಒಂದು ಸರಳ ನೀತಿಯ ಪ್ರತಿಪಾದನೆ ಮಾತ್ರ. ಇಂದಿಗೂ ಯಕ್ಷಗಾನದ ಅನೇಕ ತಂಡಗಳು ತಮ್ಮ ಪೂರ್ವ ಪದ್ಧತಿಯಾದ ಧಾರ್ಮಿಕ ನೆಲೆಯ ಸಂಬಂಧವನ್ನು ಉಳಿಸಿಕೊಂಡು ಅದೇ ಮಾರ್ಗದಲ್ಲಿ ಬೆಳೆಸಿಕೊಂಡು ಬಂದಿರುವುದನ್ನು ನೋಡಬಹುದಾಗಿದೆ. ಮೂಡಲಪಾಯದ ಬಯಲಾಟ ಪ್ರಭೇದಗಳು ಎರಡು ಕಾರಣದಿಂದ ದೇವಸ್ಥಾನದ ನೆಲೆಯನ್ನು ಕಳೆದುಕೊಂಡವು ಎಂಬುದಾಗಿ ವಿದ್ವಾಂಸರು ತಿಳಿಸುತ್ತಾರೆ. ಒಂದನೆಯದಾಗಿ ಉತ್ತರ ಕರ್ನಾಟಕದ ಕಡೆಗೆ ಬೀಸಿದ ಕಂಪನಿ ನಾಟಕಗಳ ಪ್ರಭಾವ. ಎರಡನೆಯದಾಗಿ ಬೆಂಗಳೂರು ಆಧುನಿಕ ವಿಜ್ಞಾನ ಸಾಂಸ್ಕೃತಿಕ ಮೂಲ ಮುಖ್ಯ ಪ್ರಸರಣ ಕೇಂದ್ರವಾಗಿ ರೂಪಗೊಂಡದ್ದು ಎಂಬುದಾಗಿ ತಿಳಿದು ಬರುತ್ತದೆ.

ಪ್ರಸ್ತುತ ನನ್ನ ಸಂಶೋಧನಾ ವಿಷಯವಾದ "ಕಲ್ಯಾಣ ಕರ್ನಾಟಕದ ಬಯಲಾಟಗಳ ಒಂದು ಸಾಸ್ಕೃತಿಕ ಅಧ್ಯಯನ" ಎಂಬ ವಿಷಯಕ್ಕೆ ಸಂಬಂಧಿಸಿದಂತೆ "ಬಯಲಾಟದಲ್ಲಿನ ಪ್ರಸ್ತುತ ಮಾರ್ಪಾಡುಗಳು" ಎಂಬ ಈ ಲೇಖನದಲ್ಲಿ ಬಯಲಾಟದಲ್ಲಿ ಬರುವ ಬಯಲಾಟದ ಇತಿಹಾಸ, ಬಯಲಾಟದ ಕಥಾ ವಸ್ತುವಿನ ಆಯ್ಕೆ, ಪಾತ್ರಗಳ ಆಯ್ಕೆ, ಬಯಲಾಟದ ತಾಲಿಮು ಅಥವಾ ತರಬೇತಿ, ರಂಗಮಂಟಪದ ನಿರ್ಮಾಣ, ವೇಷ ಭೂಷಣಗಳು, ಬಯಲಾಟದ ಸಂಗೀತ, ಆಟದ ಪ್ರದರ್ಶನ ಮತ್ತು ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಳ್ಳುವಲ್ಲಿ ಬಯಲಾಟವು ಹೇಗೆ ಸಹಕಾರಿಯಾಗಿದೆ ಎಂಬ ವಿಷಯಗಳನ್ನೊಳಗೊಂಡಂತೆ ಈ ಪತ್ರಿಕೆಯನ್ನು ಸಿದ್ದಪಡಿಸಿದ್ದೇನೆ.

**ಬಯಲಾಟದ ಇತಿಹಾಸ:**

ಬಯಲಾಟದ ಇತಿಹಾಸವು 150 ವರ್ಷಗಳಿಗಿಂತ ಹಿಂದೆ ಹೋಗುವುದಿಲ್ಲ. ಪ್ರಾರಂಭದಲ್ಲಿ ಪ್ರಚಲಿತವಿದ್ದ ಆಟಗಳಲ್ಲಿ ಹಾಡು ಮತ್ತು ಕುಣಿತಗಳು ಪ್ರಧಾನವಾಗಿದ್ದವು ಎಂದು ಕಂಡುಬರುತ್ತದೆ. ಬೈಲಹೊಂಗಲದ ದುರುದುಂಡೇಶ ಕವಿ ರಚಿಸಿದ 'ಪ್ರಭುದೇವ' ಹಾಗೂ 'ಕೃಷ್ಣಹರಣ' ಯಕ್ಷಗಾನ ಕೃತಿಗಳಲ್ಲಿ ನಡುನಡುವೆ ಲಿಖಿತ ಸಂಭಾಷಣೆಯಿದ್ದು ನಾಟಕೀಯ ರೂಪ ಎದ್ದು ಕಾಣುತ್ತದೆ. ಈಗ ಲಭ್ಯವಿರುವ ದೊಡ್ಡಾಟಗಳ ಕೃತಿಗಳಲ್ಲಿ 'ಕುಮಾರರಾಮ' ಪ್ರಾಚೀನವಾದ ದೊಡ್ಡಟದ ಕೃತಿಯಾಗಿದೆ. ಬಳ್ಳಾರಿಯಲ್ಲಿ 1900 ಸುಮಾರಿಗೆ ಪ್ರಕಟಗೊಂಡ ದೊಡ್ಡಾಟ ಕೃತಿಗಳು ಅಲ್ಲಲ್ಲಿ ಕಾಣಸಿಗುತ್ತವೆ. ದೊಡ್ಡಾಟಗಳು 19ನೇ ಶತಮಾನದ ಉತ್ತರಾರ್ಧದಲ್ಲಿ ಹೆಚ್ಚು ಜನಪ್ರಿಯವಾಗಿದ್ದವು ಎಂಬುದಕ್ಕೆ ಈ ಕೃತಿಗಳು ಕಾರಣವಾಗುತ್ತವೆ. ಈ ಪ್ರಕಟಣೆಯ ನಂತರ ಅನೇಕ ಕವಿಗಳು ದೊಡ್ಡಾಟವನ್ನು ರಚಿಸಿ ಮತ್ತಷ್ಟು ಜನಪ್ರಿಯಗೊಳಿಸಿದರು. ಹಸ್ತಪ್ರತಿಗಳು ಊರಿಂದ ಊರಿಗೆ ಸಂಚರಿಸಿದ್ದುದರಿಂದ ಕವಿಯ ಹೆಸರನ್ನು ಗುರುತಿಸುವುದು ಕಷ್ಟದ ಕೆಲಸವಾಗಿದೆ ಎಂಬುದನ್ನು ವಿದ್ವಾಂಸರಿಲ್ಲಿ ವ್ಯಕ್ತಪಡಿಸುತ್ತಾರೆ.

**ಬಯಲಾಟದ ಕಥಾ ವಸ್ತುವಿನ ಆಯ್ಕೆ:**

ಬಯಲಾಟ ಪ್ರದರ್ಶನಕ್ಕೆ ಅತ್ಯಂತ ಪ್ರಮುಖ ಸ್ಥಾನವನ್ನು ವಹಿಸುತವಂತಹದು ಬಯಲಾಟದ ಕಥಾವಸ್ತುವಿನ ಆಯ್ಕೆ. ಏಕೆಂದರೆ ಇದರ ನಂತರ ಬಯಲಾಟದ ಪಾತ್ರಗಳ ವಿಂಗಡಣೆ ನಡೆಯುತ್ತದೆ. ಈ ಕಥಾ ವಸ್ತುವಿನ ಆಯ್ಕೆಯಲ್ಲಿ ಊರಿನ ಹಿರಿಯರು, ಮುಖಂಡರು, ಭಾಗವತರು, ಹಾರ್ಮೋನಿಯಂ ಮೇಷ್ಟು ಹಾಗೂ ವಾದ್ಯದವರು ಮತ್ತು ಕಲಾವಿದರು ಸೇರಿ ಒಂದು ದೇವರ ಗುಡಿ ಅಥವಾ ಪಂಚಾಯತಿ ಕಟ್ಟಿಯಲ್ಲಿ ಸೇರಿಕೊಂಡು ಆ ಒಂದು ಕಥಾ ವಸ್ತುವಿಗೆ ತಕ್ಕಂತೆ ಪಾತ್ರಗಳ ಆಯ್ಕೆಯನ್ನು ಮಾಡುತ್ತಿದ್ದರು. ಕಥಾ ವಸ್ತುವಿನ ಆಯ್ಕೆಯೂ ನಮ್ಮ ಭಾಗಗಳಲ್ಲಿ ಅಂದರೆ ಬಳ್ಳಾರಿ ಜಿಲ್ಲೆಯಲ್ಲಿ ಕೆಲವು ಊರುಗಳಲ್ಲಿ ಒಂದು ವರ್ಷಕ್ಕೆ ಮುಂಚಿತವಾಗಿಯೇ ಯಾವ ಕಥೆಯನ್ನು ನಾವು ಮುಂದಿನ ವರ್ಷ ಪ್ರದರ್ಶಿಸಲಿದ್ದೇವೆ ಎಂಬುದನ್ನು ತಿಳಿಸುತ್ತಿದ್ದರು. ಇನ್ನೂ ಕೆಲವು ತಂಡಗಳು ಆರರಿಂದ ಎಂಟು ತಿಂಗಳ ಮುಂಚೆಯೇ ಆ ಒಂದು ಕಥೆಯನ್ನು ನಿಗದಿಪಡಿಸಿ ಪಾತ್ರಧಾರಿಗಳಿಗೆ ಪಾತ್ರಗಳನ್ನು ಹಂಚುವ ಕೆಲಸ ಮಾಡುತ್ತಿದ್ದರು. ಈ ಕಥೆ ಹಾಯ್ಕೆಯ ಸಮಯದಲ್ಲಿ ಒಂದು ಕಥೆ ಅಥವಾ ಸನ್ನಿವೇಶಕ್ಕೆ ಎಲ್ಲರ ಒಪ್ಪಿಗೆಯನ್ನು ಸೂಚಿಸುವುದರೊಂದಿಗೆ ಆ ಒಂದು ಪಂಚಾಯಿತಿ ಅಥವಾ ಆ ಒಂದು ಪ್ರಸಂಗದ ಆಯ್ಕೆಯ ಕಾರ್ಯಕ್ರಮವನ್ನು

ಮುಗಿಸುತ್ತಿದ್ದರು. ತದನಂತರ ಆಯ್ಕೆಯಾದ ಬಯಲಾಟ ಪ್ರಸಂಗದ ಹೆಸರನ್ನು ಬರೆದು ದೇವಸ್ಥಾನದಲ್ಲಿ ಅಂದರೆ ಆಯಾ ಊರಿನ ಗುಡಿಯಲ್ಲಿರುವ ದೇವರ ಮುಂದೆ ಇಟ್ಟು ಪೂಜೆ ಸಲ್ಲಿಸುತ್ತಿದ್ದರು.

ಇತ್ತೀಚಿನ ದಿನಗಳಲ್ಲಿ ಈ ಬಯಲಾಟದ ಕಥಾ ವಸ್ತುಗಳ ಆಯ್ಕೆ ವಿಷಯದಲ್ಲಿ ರಾಜಕೀಯ ವ್ಯಕ್ತಿಗಳು ಕೂಡ ಭಾಗಿಯಾಗುವುದನ್ನು ನೋಡಬಹುದಾಗಿದೆ. ಅದೇ ರೀತಿ ಆ ಭಾಗದ ಹಿರಿಯರೊಂದಿಗೆ ಹಾರ್ಮೋನಿಯಂ ಮೇಷ್ಟ್ರು, ಭಾಗವತರು, ಸಾರಥಿ ಮತ್ತು ಕಲಾವಿದರುಗಳೆಲ್ಲರೂ ಸೇರಿ ಆ ಒಂದು ಸನ್ನಿವೇಶ ಅಥವಾ ಕಥಾ ವಸ್ತುವಿಗೆ ಎಷ್ಟೆಲ್ಲಾ ಕರ್ಚಾಗಬಹುದು ಎಂಬುದನ್ನು ತಿಳಿಯಲು ಅದರ ಖರ್ಚು ವೆಚ್ಚದ ಒಂದು ಪಟ್ಟಿಯನ್ನು ಸಿದ್ಧಮಾಡುತ್ತಾರೆ. ಈ ಖರ್ಚು ವೆಚ್ಚವನ್ನು ಹೇಗೆ ಬರಿಸಬೇಕೆನ್ನುವ ಒಂದು ಮುಂಜಾಗ್ರತ ಯೋಜನೆಯನ್ನು ರೂಪಿಸುತ್ತಾರೆ. ಮಹಿಳಾ ಕಲಾವಿದರು ಯಾರು ಯಾರು ಬೇಕಾಗುತ್ತಾರೆ, ಯಾವ್ಯಾವ ಭಾಗದಿಂದ ಅವರನ್ನು ಕರೆಸಬೇಕಾಗುತ್ತದೆ. ಅವರಿಗೆ ತಗಲುವ ಖರ್ಚು ಸಹ ಈ ಸಮಯದಲ್ಲಿ ಲೆಕ್ಕ ಹಾಕಿ ಅದರ ಒಟ್ಟಾರೆ ಅಂದಾಜು ಮೊತ್ತವನ್ನು ತಿಳಿಸಲಾಗುತ್ತದೆ.

ತದನಂತರದಲ್ಲಿ ಪಾತ್ರಗಳ ವಿಂಗಡಣೆ ಮಾಡುವ ಸಮಯದಲ್ಲಿ ಆಯಾ ಪಾತ್ರಗಳಿಗೆ ಇಂತಿಷ್ಟು ಮೊತ್ತವನ್ನು ಕೊಡಬೇಕು ಎಂಬುದನ್ನು ಸಹ ತಿಳಿಸಲಾಗುತ್ತದೆ. ಯಾವ ಯಾವ ಪಾತ್ರ ಮಾಡುವವರು ಎಷ್ಟೆಷ್ಟು ಹಣವನ್ನು ಸಂಗ್ರಹಿಸಬೇಕು. ಮತ್ತು ತಾವು ತಮ್ಮ ಕೈಯಿಂದ ಎಷ್ಟು ಹಾಕಿಕೊಳ್ಳಬೇಕು ಎಂಬುದನ್ನು ಸಹ ಲೆಕ್ಕ ಹಾಕಿ ಆ ಪಾತ್ರಕ್ಕನುಗುಣವಾಗಿ ಖರ್ಚನ್ನು ವಿಂಗಡಿಸುತ್ತಾ ಒಟ್ಟಾರೆ ನಾಟಕದ ಖರ್ಚಿನ ಮೊತ್ತವನ್ನು ಅಲ್ಲೇ ತೋರಿಸಲು ಪ್ರಯತ್ನಿಸುತ್ತಾರೆ. ಜೊತೆಗೆ ರಾಜಕೀಯ ವ್ಯಕ್ತಿಗಳಿಂದ ಆ ಗ್ರಾಮದ ಗ್ರಾಮ ಪಂಚಾಯತಿ ಸದಸ್ಯರು ಮತ್ತು ಅಧ್ಯಕ್ಷರು ಹಾಗೂ ಇತರ ಸಂಘ ಸಂಸ್ಥೆಗಳಿಂದ ಕೂಡ ಪಟ್ಟಿ ಎತ್ತುವ ಕಾರ್ಯಗಳು ಸಹ ನಡೆಯುತ್ತವೆ.

**ಪಾತ್ರಗಳ ಆಯ್ಕೆ:**

ಈ ಬಯಲಾಟಗಳು ಹೆಚ್ಚಾಗಿ ರಾಮಾಯಣ, ಮಹಾಭಾರತ, ದೇವಿ ಪುರಾಣ ಮತ್ತು ಭಾಗವತಗಳಿಗೆ ಸಂಬಂಧಪಟ್ಟಂತಹ ಕಥಾ ಪ್ರಸಂಗಗಳಾಗಿರುವುದರಿಂದ, ಆ ಕಥೆಗೆ ತಕ್ಕಂತೆ ದೇಹ ಮತ್ತು ಧ್ವನಿಯ ಬಗ್ಗೆಯೂ ಗಮನಹರಿಸಿ ಆ ದೇಹ ಮತ್ತು ಧ್ವನಿಗೆ ತಕ್ಕಂತಹ ಪಾತ್ರಗಳನ್ನು ಆಯ ವ್ಯಕ್ತಿಗೆ ವಿಂಗಡಿಸುತ್ತಾ ಹೋಗುತ್ತಾರೆ. ಈ ಪಾತ್ರಧಾರಿಗಳು ತಮ್ಮ ಪಾತ್ರಕ್ಕೆ ಸಂಬಂಧಿಸಿದ ಸಂಭಾಷಣೆಯನ್ನು ಒಂದು ನೋಟು ಬುಕ್‌ನಲ್ಲಿ ಬರೀಸಿಕೊಂಡು ಅವುಗಳನ್ನು ವಿದ್ಯಾವಂತರಿಂದ ಹೇಳಿಸಿಕೊಳ್ಳುತ್ತ ಆ

ಪಾತ್ರದ ದಾಟಿಯಲ್ಲಿ ಕಲಿಯಲು ಪ್ರಯತ್ನಿಸುತ್ತಿದ್ದರು. ತದನಂತರದಲ್ಲಿ ಆ ಒಂದು ಪ್ರತಿಗಳನ್ನು ಜೆರಾಕ್ಸ್ ಮಾಡುವ ಹಂತಕ್ಕೆ ಬಂದಿತು. ಪ್ರಸ್ತುತ ಸಮಯದಲ್ಲಿ ಈ ಒಂದು ಬಯಲಾಟದ ಸಂಭಾಷಣೆಯನ್ನು ಹೆಚ್ಚಾಗಿ ಮೊಬೈಲ್ಗಳಲ್ಲಿ ಕೇಳುತ್ತಾ ಅಂದರೆ ಈಗ ಮುಂದುವರೆದಿರುವ ಈ ಟೆಕ್ನಾಲಜಿಯನ್ನು ಬಳಸಿಕೊಂಡು ಅನಕ್ಷರಸ್ಥ ಕಲಾವಿದರು ಕೂಡ ಮೊಬೈಲ್‌ನಲ್ಲಿ ಅವರ ಪಾತ್ರದ ಸಂಭಾಷಣೆಯನ್ನು ಕೇಳುತ್ತಾ ಕಲಿಯುವ ಹಂತಕ್ಕೆ ಬಂದಿದ್ದಾರೆ. ಈ ಕಲಾವಿದರು ರೈತ ಕುಟುಂಬದವರು ಅಥವಾ ಕಾರ್ಮಿಕರು ಅಥವಾ ಬೇರೆ ಯಾವುದೋ ಕೆಲಸದಲ್ಲಿ ತೊಡಗಿರುವಂತವರು, ಅನಕ್ಷರಸ್ಥರಾಗಿದ್ದರೂ ಕೂಡ ತಮ್ಮ ಮೊಬೈಲ್ನಲ್ಲಿ ಆ ಪಾತ್ರದ ಸಂಭಾಷಣೆಯನ್ನು ತೆಗೆದುಕೊಂಡು ಕೇಳುತ್ತಾ ಕಲಿಯಲು ಪ್ರಯತ್ನಿಸುತ್ತಾರೆ. ತದನಂತರ ಅದರಲ್ಲಿರುವ ತಪ್ಪುಗಳನ್ನು ಮತ್ತು ಕೆಲವು ತಿದ್ದುಪಡಿಗಳನ್ನು ಹಾರ್ಮೋನಿಯಂ ಮಾಷ್ಟ್ರ ಅಥವಾ ಭಾಗವತರು ಅಥವಾ ಸಾರಥಿಗಳಿಂದ ತಿದ್ದಿಕೊಳ್ಳುತ್ತ ಆ ಪಾತ್ರದ ಒಂದು ಪಕ್ವತೆಯನ್ನು ಪಡೆಯಲು ಪ್ರಯತ್ನಿಸುತ್ತಾರೆ. ಸ್ತ್ರೀ ಪಾತ್ರಗಳು ತಮ್ಮ ಜೊತೆಗಿದ್ದರಂತೂ ಆ ಪಾತ್ರಗಳಿಗೆ ಹೆಚ್ಚಿನ ಡಿಮ್ಯಾಂಡು ಅಂದರೆ ಹೆಚ್ಚಿನ ಬೇಡಿಕೆ ಇದ್ದು ಆ ಪಾತ್ರ ಮಾಡುವವರು ಹೆಚ್ಚಿನ ರೀತಿಯಲ್ಲಿ ಖರ್ಚನ್ನು ಭರಿಸುಲು ಮುಂದಾಗ ಬೇಕಾಗುತ್ತದೆ. ಈ ಬಯಲಾಟದಲ್ಲಿ ಖಳನಾಯಕ ಪಾತ್ರಗಳು ಹೆಚ್ಚಾಗಿ ಘರ್ಜಿಸುವ ಪಾತ್ರಳಾಗಿದ್ದು ಶರೀರ ಮತ್ತು ಧ್ವನಿ ಇರುವವರನ್ನು ವಿಂಗಡಿಸಿ ಆ ಪ್ರಕಾರವಾಗಿ ಪಾತ್ರದ ಖರ್ಚನ್ನು ವಹಿಸಿಕೊಳ್ಳಲು ಸಮರ್ಥರಾಗಿರುವಂತಹ ಪಾತ್ರಧಾರಿಗಳಿಗೆ ಪಾತ್ರಗಳನ್ನು ನೀಡುತ್ತಾರೆ. ಎಲ್ಲಾ ಪಾತ್ರಧಾರಿಗಳು ಹಾರ್ಮೋನಿಯಂ ಮಾಷ್ಟ್ರ ಅಥವಾ ಭಾಗವತರನ್ನು ತಮ್ಮ ಅನುಕೂಲದ ಸಮಯದಲ್ಲಿ ಮತ್ತು ಎಲ್ಲರೂ ಸೇರುವ ಸಮಯವನ್ನು ನಿಗದಿಪಡಿಸಿಕೊಂಡು, ಪಾತ್ರದ ತಯಾರಿ ಮತ್ತು ನಾಟಕದ ತಾಲೀಮನ್ನು ನಡೆಸುತ್ತಾರೆ.

**ಬಯಲಾಟದ ತಾಲಿಮು ಅಥವಾ ತರಬೇತಿ:**

ಬಯಲಾಟದ ತಾಲಿಮು ಒಂದೇ ಸಲಕ್ಕೆ ನಡೆಯುವಂತಹದ್ದಲ್ಲ. ಆಯಾ ಪಾತ್ರಗಳಿಗೆ ಇಂತಿಷ್ಟು ದಿನಗಳು ಎಂದು ಮೀಸಲಿಟ್ಟು, ಆ ಪಾತ್ರವನ್ನು ತಿದ್ದುವ ಕೆಲಸವನ್ನು ಹಾರ್ಮೋನಿಯಂ ಮಾಷ್ಟ್ರ ಅಥವಾ ಭಾಗವತರು ವಹಿಸಿಕೊಳ್ಳುತ್ತಾರೆ. ಮಧ್ಯಾಹ್ನ ಅಥವಾ ಸಂಜೆ 4ರ ನಂತರ ಎಲ್ಲಾ ಪಾತ್ರಗಳು ಸೇರಿ ಆಯಾ ಪಾತ್ರಗಳು ತಾವು ಕಲಿತಿರುವ ಸಂಭಾಷಣೆಯನ್ನು ಪ್ರಸತುತಪಡಿಸುವ ಮೂಲಕ ಮತ್ತು ಅದರಲ್ಲಿರುವ ತಪ್ಪುಗಳನ್ನು ತಿದ್ದುವುದರ ಮೂಲಕ ಕಲಿಯುತ್ತಾ ಹೋಗುತ್ತಾರೆ. ಈ ಒಂದು ತಾಲೀಮನ್ನು ಹೆಚ್ಚಾಗಿ ದೇವಸ್ಥಾನ ಅಥವಾ ನಮ್ಮ ಹಳ್ಳಿಯ ಭಾಗದಲ್ಲಿ ಕರೆಯಲ್ಪಡುವ ಗುಡಿಗಳು ಅಥವಾ ಯಾವುದಾದರೂ ಒಂದು ಖಾಲಿ ಇರುವ

ಮನೆಯಲ್ಲಿ ಈ ಒಂದು ತಾಲಿಮನ್ನು ಪ್ರಾರಂಭಿಸುತ್ತಾರೆ.

ಹಾರ್ಮೋನಿಯಂ ನುಡಿಸುತ್ತಾ ಆ ಸಂಭಾಷಣೆ ಯಾವ ಯಾವ ಸಮಯದಲ್ಲಿ ಯಾವ ಯಾವ ಅಂತರದಲ್ಲಿ ಯಾವೆಲ್ಲ ಶಬ್ದಗಳ ಜೊತೆಗೆ ಹಿನ್ನೆಲೆ ಗಾಯನ ಬರುತ್ತದೆ ಎಂಬುದನ್ನು ತರಬೇತಿಯಲ್ಲಿ ತಿಳಿಸುತ್ತಾ ಆ ಪಾತ್ರಧಾರಿಗಳಿಗೆ ಸರಿಯಾದ ರೀತಿಯಲ್ಲಿ ತರಬೇತಿ ನೀಡುತ್ತಾ ಹೋಗುತ್ತಾರೆ.

ಪಾತ್ರಧಾರಿಗಳು ತಮ್ಮ ಕುಣಿತವನ್ನು ಕಲಿಯುವಾಗ ತಾಳ ಮತ್ತು ಅದಕ್ಕೆ ತಕ್ಕನಾದ ಗತ್ತುಗಳನ್ನು ಮತ್ತು ಹೆಜ್ಜೆಗಳನ್ನು ಹೇಳುವ ಒಬ್ಬ ಹಾರ್ಮೋನಿಯಂ ಮಾಷ್ಟ್ರು ಅಥವಾ ಒಬ್ಬ ಕುಣಿತದ ತರಬೇತಿದಾರ ಅಥವಾ ಭಾಗವತರು ಬಂದು ಕುಣಿತಗಳನ್ನು ತಾಳಕ್ಕೆ ತಕ್ಕಂತೆ ಕುಣಿಯುವುದನ್ನು ಕಲಿಸುತ್ತಾರೆ.

**ರಂಗಮಂಟಪದ ನಿರ್ಮಾಣ:**

ಬಯಲಾಟದ ರಂಗಮಂಟಪವು ಭವ್ಯವಾಗಿದ್ದು ಗಟ್ಟಿ ಮುಟ್ಟಾದುದ್ದು ಆಗಿರುತ್ತದೆ. ಏಕೆಂದರೆ ಇಲ್ಲಿ ಕುಣಿತವೇ ಪ್ರಧಾನವಾಗಿರುವುದರಿಂದ ಗಟ್ಟಿ ಮುಟ್ಟಾದ ರಂಗಮಂಟಪ ರಚಿಸಬೇಕಾದದ್ದು ಅನಿವಾರ್ಯವೂ ಆಗಿರುತ್ತದೆ. ಮೊದಲೆಲ್ಲ ಎತ್ತಿನ ಗಾಡಿಯ ಚಕ್ರಗಳನ್ನು ಹುಗಿದು, ತೊಲೆಗಳನ್ನು ಜೋಡಿಸಿ, ಅದರ ಮೇಲೆ ಹಲಿಗೆಗಳನ್ನು ಹಾಕುತ್ತಿದ್ದರು. ಹಿಂಬದಿಗೆ ಗುಡಾರ ಹಾಕಿ ಮುಚ್ಚುತ್ತಿದ್ದರು. ಇದರ ಹಿಂದೆ ಪಾತ್ರಧಾರಿಗಳು ವೇಷಭೂಷಣಗಳನ್ನು ತೊಟ್ಟು ತಯಾರಾಗಲು ಬಣ್ಣದ ಚೌಕಿ ಇರುತ್ತದೆ. ರಂಗ ಮಂಟಪವನ್ನು ಅಟ್ಟದಂತೆ ನಿರ್ಮಿಸಿ ಮರದ ಹಲಗೆಗಳನ್ನು ಹಾಕುತ್ತಾರೆ ಅದಕ್ಕಾಗಿಯೇ ಬಯಲಾಟವನ್ನು ಅಟ್ಟದಾಟವೆಂತಲೂ ಕರೆಯುತ್ತಾರೆ. ರಂಗಮಂಟಪಕ್ಕೆ ಅಟ್ಟ, ಚಪ್ಪರ, ಹಂದರ ಎಂದು ಕರೆಯುತ್ತಾರೆ. ದೇವಸ್ಥಾನಗಳ ಮುಂದಿನ ವಿಶಾಲ ಸ್ಥಳದಲ್ಲಿ ಅಟ್ಟದ ನಿರ್ಮಾಣವಾಗುತ್ತದೆ. ಆಟಕ್ಕಿಂತ ಹತ್ತರಿಂದ ಇಪ್ಪತ್ತು ದಿನಗಳಿಗಿಂತ ಮುಂಚಿತವಾಗಿ ಹಂದರಗಂಭ ನೆಡುತ್ತಾರೆ. ಇದರಿಂದ ಪ್ರಚಾರವೂ ಆದಂತೆ ಇರುತ್ತದೆ. ಎರಡು ದಿನ ಮೊದಲು ಮಂಟಪ ನಿರ್ಮಾಣ ಕಾರ್ಯ ಪ್ರಾರಂಭವಾಗುತ್ತದೆ. ದೊಡ್ಡ ದೊಡ್ಡ ತೊಲೆಗಳನ್ನು ಒಂದರ ಮೇಲೊಂದಿಟ್ಟು ಅಥವಾ ಎಣ್ಣೆ ಡಬ್ಬಿಗಳನ್ನು ಇಟ್ಟು ಅದರ ಮೇಲೆ ಹಲಿಗೆಗಳನ್ನು ಜೋಡಿಸುವುದು ಉಂಟು. ಹಿಂಬದಿಯನ್ನು ಗುಡಾರದಿಂದ ಮುಚ್ಚಲಾಗುತ್ತದೆ. ಮುಂಭಾಗದ ಮತ್ತು ಎಡ ಬಲ ಭಾಗಗಳು ತೆರೆದಿರುತ್ತವೆ. ಮೇಲೆ ಬಿದಿರಿನ ಗಳಗಳಿಂದ ಚಪ್ಪರ ಹಾಕಿ ಗುಡಾರಗಳನ್ನು ಓದಿಸಲಾಗಿರುತ್ತದೆ. ಹಲಿಗೆಗಳ ಮೇಲೆಯೂ ಗುಡಾರ ಹಾಸಲಾಗಿರುತ್ತದೆ. ಆದರೆ ರಂಗ ಮಂಟಪದ ರಚನೆ ಮೊದಲಿನ ಭವ್ಯತೆಯನ್ನು ಕಳೆದುಕೊಂಡು ಈಗ ಸರಳವಾಗಿದೆ ಎಂದು

ಹೇಳಬಹುದು. ಮರದ ತೊಲೆಗಳ ಬದಲು ರೈಲು ಹಳಿಯ ಪಟ್ಟಿಯಂತಿರುವ ಕಬ್ಬಿಣದ ಸರಳುಗಳ ಮೇಲೆ ಹಲಿಗೆಗಳನ್ನು ಜೋಡಿಸುತ್ತಾರೆ. ಮಂಟಪಕ್ಕೆ ವೈವಿಧ್ಯಮಯವಾಗಿ ಕಾಣಲು ಝಗಝಗಿಸುವ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಿರುತ್ತಾರೆ.

**ವೇಷ ಭೂಷಣಗಳು:**

ಮಾನವ ಶರೀರವನ್ನು ಮುಚ್ಚುವ ಸಾಧನವೆ ಉಡುಪು, ಶರೀರವನ್ನು ಮುಚ್ಚುವುದರೊಂದಿಗೆ ರಕ್ಷಿಸುತ್ತದೆ ಮತ್ತು ಅಲಂಕರಿಸುತ್ತದೆ. ಮಾನವರಿಗೂ ಪ್ರಾಣಿಗಳಿಗೂ ಇರುವ ಒಂದು ಮುಖ್ಯ ವ್ಯತ್ಯಾಸವೆಂದರೆ ಅವರು ಧರಿಸುವ ಉಡುಪು. ಮನುಷ್ಯ ತನ್ನ ಪ್ರತಿಷ್ಠೆ ಬೆಳೆಸಿಕೊಳ್ಳುವ ಉದ್ದೇಶದಿಂದಲೂ ಉಡುಪಿಗೆ ಮಾರು ಹೋಗಿದ್ದಿರಬಹುದು. ಉಡುಪು, ಆಭರಣಗಳೂ ಪ್ರಾಣಿಗಳ ಪಾಲಿಗೆ ಸಾಧ್ಯವಿಲ್ಲದ ಒಂದು ಪರಿಕರ. ತಲೆಯ ಟೊಪ್ಪಿಗೆಯಲ್ಲಿ ಗರಿಯೊಂದನ್ನು ಸಿಕ್ಕಿಸಿಕೊಂಡರೆ ಅವನ ನಿಲುವೂ, ಆತ್ಮವಿಶ್ವಾಸವೂ ಬೆಳೆದಂತೆ. ಹೆಚ್ಚು ಗರಿಗಳನ್ನು ಸಿಕ್ಕಿಸಿಕೊಂಡಷ್ಟೂ ಅವು ಇತರರ ಅಸೂಯೆಗೆ ಕಾರಣವಾಗಬಹುದು. ಇವನ್ನು ಧರಿಸಲು ಹೋರಾಟ ಅನಿವಾರ್ಯವೇ ಆದೀತು. ಈ ಹೋರಾಟದಲ್ಲಿ ಗೆದ್ದವರಿಗೆ ಮಾತ್ರ ಹೆಚ್ಚು ಪುಕ್ಕ ಧರಿಸುವ ಅಧಿಕಾರ. ಇಂದಿಗೂ ಸೈನ್ಯದಲ್ಲೂ, ಸಾರ್ವಜನಿಕ ಜೀವನದಲ್ಲೂ ಪ್ರಭಾವ ಬೀರುವ ಪದಕಗಳೂ, ಬಗೆ ಬಗೆಯ ಉಡುಪುಗಳೂ ಆಯಾ ಅಂತಸ್ತುಗಳ ಸಂಕೇತ. ಇದನ್ನೆಲ್ಲಾ ದೃಷ್ಟಿಯಲ್ಲಿ ಇಟ್ಟುಕೊಂಡೆ ಬಯಲಾಟಕ್ಕೆ ವಿಶಿಷ್ಟವಾದ ವೇಷ ಭೂಷಣಗಳ ತಯಾರಿ ನಡೆದಿರಬಹುದೆಂದೆನಿಸುತ್ತದೆ. ಬಯಲಾಟದಲ್ಲಿ ಶ್ರೀಮಂತಿಕೆಯಿಂದ ಕೂಡಿದ ವೇಷ ಭೂಷಣಗಳು ಕಂಡುಬರುತ್ತವೆ. ವೇಷ ಭೂಷಣವನ್ನು ಗುರುತಿಸಿಯೇ ಇದೇ ಪಾತ್ರವೆಂದು ಹೇಳುವಷ್ಟರ ಮಟ್ಟಿಗೆ ಪಾತ್ರಗಳಿಗೆ ಬಣ್ಣ, ವೇಷ ಭೂಷಣದ ನಿರ್ದಿಷ್ಟತೆ ಕಂಡು ಬರುತ್ತದೆ. ಪಾತ್ರಗಳ ರೂಪ, ಲಕ್ಷಣ, ಘನತೆ–ಗೌರವಗಳಿಗೆ ಹೊಂದಾಣಿಕೆ ಆಗುವಂತೆ ವೇಷಭೂಷಣಗಳನ್ನು ನಿರ್ಧರಿಸಿರುತ್ತಾರೆ. ಯುವರಾಜರು, ಮಹಾರಾಜರು, ರಾಕ್ಷಸರು, ಕಿನ್ನರ ಕಿಂಪುರುಷರುಗಳು ಧರಿಸುವ ಕಿರೀಟಗಳು ಬೇರೆ ಬೇರೆಯಾಗಿರುತ್ತವೆ. ಸೋನರಿ ಅಥವಾ ಕೆಂಪು ಬಣ್ಣದ ಹಾಳೆಯನ್ನು ಕನ್ನಡಿಯ ಚೂರುಗಳನ್ನು ಅಂಟಿಸಿ ಝಗಝಗಿಸುವಂತೆ ಮಾಡಿರುತ್ತಾರೆ.

ಸ್ತ್ರೀ ಪಾತ್ರಗಳಿಗಾಗಿಯೇ ವಿಶೇಷ ಕಿರೀಟಗಳನ್ನು ಮಾಡಿರುತ್ತಾರೆ ರಾಕ್ಷಸ ಪಾತ್ರಗಳು ಧರಿಸುವ ಕಿರೀಟ ದೊಡ್ಡ ಗಾತ್ರವಿರುತ್ತದೆ. ಕಿರೀಟಗಳಲ್ಲಿ ವಿಶಿಷ್ಟವಾದ ನಕ್ಷೆಗಳನ್ನು ಕೆತ್ತಿರುತ್ತಾರೆ. ಸ್ತ್ರೀ ಪಾತ್ರದ ಕಿರೀಟಗಳನ್ನು ರೆಟ್ಟಿನಿಂದ ಅಥವಾ

ತಗಡಿನಿಂದ ಮಾಡಿರುತ್ತಾರೆ. ಭುಜಕೀರ್ತಿ ಬಯಲಾಟದಲ್ಲಿ ವಿಶಿಷ್ಟವಾದುದು. ಕೈಗೆ ಕೈಕಟ್ಟು, ಕೊರಳಲ್ಲಿ ಬಣ್ಣದ ಬಣ್ಣದ ಸರಗಳು, ಕೈಯಲ್ಲಿ ಖಡ್ಗ, ಬಿಲ್ಲು, ಬಾಣ ಅಥವಾ ಗಧೆಗಳಿರುತ್ತವೆ. ಕಾಲಿಗೆ ಗೆಜ್ಜೆಯು ಕಟ್ಟಿರುತ್ತಾರೆ. ವೇಷ ಭೂಷಣಗಳಲ್ಲಿ ಚೌಕಳಿ ಕೆಂಪು ಕಪ್ಪು ಬಣ್ಣದ ಸೀರೆಗಳನ್ನು ವೀರಗಾಸೆಯಂತೆ ಉಡುತ್ತಾರೆ. ಒಂದು ಬಣ್ಣದ ಬಟ್ಟೆಯನ್ನು ಭುಜದಿಂದ ನೆಲಕ್ಕೆ ಮುಟ್ಟುವಂತೆ ಬೆನ್ನಿನ ಹಿಂದೆ ಬಿಟ್ಟಿರುತಾರೆ. ರಾಕ್ಷಸ ರೌದ್ರ ಪಾತ್ರಗಳಿಗೆ ಕುರಿಯ ಹುಣ್ಣೆಯಿಂದ ತಯಾರಿಸಿದ ದಪ್ಪವಾದ ಮೀಸೆ ಇರುತ್ತದೆ. ರಾಕ್ಷಸ ಪಾತ್ರಗಳ ತಲೆ ಕೂದಲನ್ನು ಇಳಿಬಿಟ್ಟಿರುತ್ತಾರೆ. ಪ್ರಸ್ತುತದಲ್ಲಿ ಈ ಕಿರೀಟಗಳಾಗಲಿ ಭುಜಕೀರ್ತಿಗಳಾಗಲಿ ಮತ್ತು ಎದೆಯ ಹಾರಗಳಾಗಲಿ ಹೆಚ್ಚಿನ ಭಾರವಿಲ್ಲದಂತೆ ನಿರ್ಮಿಸಿದ್ದು ಅವುಗಳನ್ನು ತೊಡುವುದರಿಂದ ಯಾವುದೇ ಒಂದು ಶ್ರಮವೆನಿಸಿದಂತೆ ಮತ್ತು ಸುಲಲಿತವಾಗಿದ್ದು ಹಗುರವಾಗಿರುವಂತಹವುಗಳನ್ನು ಬಳಸುವುದರಿಂದ ಕಲಾವಿದರು ಉತ್ತಮ ರೀತಿಯಲ್ಲಿ ಅಭಿನಯಿಸಲು ಅನುವುಮಾಡಿದಂತೆ ಈ ಒಂದು ಪ್ರಯತ್ನವನ್ನು ಮಾಡಿರುವುದು ಕಂಡುಬರುತ್ತದೆ.

**ಬಯಲಾಟದ ಕುಣಿತ:**

ಬಯಲಾಟದಲ್ಲಿ ಆರಂಭದಿಂದಲೂ ಹಾಡು ಮತ್ತು ಕುಣಿತ ಪ್ರಧಾನವಾದದ್ದು. ಪಾತ್ರಗಳು ಅವುಗಳ ಔಚಿತ್ಯವನ್ನು ಅರಿತು ನಟನೆ ಮಾಡುವುದಕ್ಕಿಂತ ಕುಣಿಯುವುದೇ ಪ್ರಮುಖವಾದ ಅಂಶ ಎಂದರೆ ತಪ್ಪಾಗಲಾರದು. ಈ ಬಯಲಾಟಗಳಲ್ಲಿ ಆಯಾ ಪ್ರದೇಶಗಳಲ್ಲಿ ಪ್ರಚಲಿತವಿರುವ ಜನಪದ ಕಲೆಗಳ ಕುಣಿತದ ಛಾಯೆಯನ್ನು ಕಾಣಬಹುದು. ಸಾಮಾನ್ಯವಾಗಿ ದೊಡ್ಡಾಡದ ಕುಣಿತಗಳು ರೌದ್ರತೆಯಿಂದ ಕೂಡಿರುತ್ತವೆ. ಪುರುಷ ಪಾತ್ರಗಳು ವಿರಾವೇಶಕ್ಕೆ ಒತ್ತು ಕೊಟ್ಟರೆ, ಸ್ತ್ರೀ ಪಾತ್ರಗಳು ಸೌಮ್ಯವಾಗಿದ್ದು ಲಾಸ್ಯ ತುಂಬಿರುತ್ತವೆ. ಮೂರು ಹೆಜ್ಜೆ, ಐದು ಹೆಜ್ಜೆ, ಆರು ಹೆಜ್ಜೆ ಹೀಗೆ ಕುಣಿತಗಳನ್ನು ಹೆಜ್ಜೆಗಳ ಅಂಕಿಗಳಿಂದ ಗುರ್ತಿಸುತ್ತಾರೆ. ಲಘು ಕುಣಿತವೂ ಬಯಲಾಟದಲ್ಲಿದೆ. ಸಾರಥಿ ಲಘು ಕುಣಿತವನ್ನು ಅನುಸರಿಸುತ್ತಾನೆ. ರೌದ್ರ ಪಾತ್ರಗಳು ಮೇಲಿಂದ ಮೇಲೆ ಎತ್ತರಕ್ಕೆ ಜಿಗಿದು ಕಾಲನ್ನು ಅಪ್ಪಳಿಸುವ ಕ್ರಮ ಹೆಚ್ಚು ಬಳಕೆಯಲ್ಲಿದೆ. ಇದರಿಂದ ಹಲಿಗೆಗಳು ಕೂಡ ದಡದಡನೆ ಸದ್ದು ಮಾಡಿ ರೋಮಾಂಚನಗೊಳಿಸುತ್ತವೆ. ಕೆಲವು ಪಾತ್ರಗಳಂತು ಕಣಿದು ಕುಣಿದು ಹಲಿಗೆಗಳನ್ನು ಮುರಿದಿರುವುದನ್ನು ಕಂಡಿದ್ದೇವೆ.

ಬಯಲಾಟಗಳಿಗೆ ಹೆಚ್ಚಾಗಿ ರೈತ ಕುಟುಂಬಗಳು ತೊಡಗಿಕೊಳ್ಳುವುದರಿಂದ ಇವರು ಹೆಚ್ಚಾಗಿ ತಮ್ಮ ಬೇಸಿಗೆ ಬಿಡುವಿನ ಸಮಯದಲ್ಲಿ ಈ ಬಯಲಾಟ ಕುಣಿತಗಳ ಅಭ್ಯಾಸವನ್ನು ನಡೆಸುತ್ತಾರೆ. ಬೇಸಿಗೆಯ ಸಮಯದಲ್ಲಿ ತಮ್ಮ ಕೃಷಿ

ಕಾರ್ಯಗಳು ಯಾವುದು ಇಲ್ಲದೆ ಬಿಡುವಾಗಿದ್ದು ಈ ಕುಳಿತಗಳ ಮೂಲಕ ದೈಹಿಕ ವ್ಯಾಯಾಮವು ಅವರಿಗಾಗುತ್ತದೆ. ಅವರು ತರಬೇತಿ ಸಮಯದಲ್ಲಿ ಕುಣಿದು ಕುಣಿದು ತಮ್ಮ ಮೇಲೆ ಇರುವ ಬಟ್ಟೆಗಳು ಸಹ ಬೆವರಿನಿಂದ ಒದ್ದೆ ಆಗಿರುವುದನ್ನು ನಾವು ಕಂಡಿದ್ದೇವೆ.

ಇತ್ತೀಚಿನ ಕೆಲವು ಬಯಲಾಟದ ಕುಣಿತಗಳನ್ನು ನೋಡಿದಾಗ ಬಹಳ ಭಯವೇ ಹುಟ್ಟಿಸುತ್ತದೆ ಏಕೆಂದರೆ ಬೈಲಾಟದ ಸಮಯದಲ್ಲಿ ಕೆಲವು ಪಾತ್ರಧಾರಿಗಳು ತಮ್ಮ ರೋಷಾವೇಶವನ್ನು ಹೆಚ್ಚಿನ ಮಟ್ಟದಲ್ಲಿ ಪ್ರದರ್ಶಿಸುವ ಹಂಬಲದಲ್ಲಿ ತಮ್ಮ ಕೈಯಲ್ಲಿ ಎರಡು ಹಾವುಗಳನ್ನಿಡಿದುಕೊಂಡು ಕುಣಿದು ಕುಪ್ಪಳಿಸುವಂತಹ ದೃಶ್ಯಗಳನ್ನು ಸಹ ನಾನು ಬಯಲಾಟದಲಿ ನೋಡಿದ್ದೇನೆ. ಇದರಿಂದ ಪ್ರಾಣಿ ಹಿಂಸೆಯಾಗಿ ಅವುಗಳಿಗೆ ನೋವುಂಟು ಮಾಡುವುದು ತಪ್ಪು ಎಂದು ಹೇಳಲು ಬಯಸುತ್ತೇನೆ. ಈಗಿನ ತಂತ್ರಜ್ಞಾನವನ್ನು ಬಳಸಿಕೊಂಡು ಕೆಲವರು ಝುಗಝುಗಿಸುವ ಬೆಳಕನ್ನು ಸೂಚಿಸುವಂತಹ ಕಿರು ಚಕ್ರಗಳನ್ನು, ಗ್ರಹಗಳನ್ನು, ಖಡ್ಗಗಳನ್ನು ಬಳಸಿ ಮತ್ತು ಮೊಣಕಾಲುಗಳಲ್ಲಿ ಕುಳಿತು ಹಾಗೂ ಮೊಣಕಾಲಿನಿಂದ ಗರಗರನೆ ತಿರುಗುತ್ತಾ ವಿಶೇಷವಾಗಿ ಕುಣಿಯುವುದನ್ನು ಸಹ ನೋಡಿದ್ದೇನೆ. ಬೈಲಾಟದಲ್ಲಿ ಬರುವ ಕೆಲವು ಸ್ತ್ರೀ ಪಾತ್ರಗಳು ಇತ್ತೀಚಿನ ಕೆಲವು ಸಿನಿಮಾ ಮತ್ತು ದಾರವಾಹಿ ಹಾಡುಗಳು ಸಂಗೀತಕ್ಕೆ ಬಯಲಾಟದ ರೀತಿಯ ಸಾಹಿತ್ಯ ಬರೆದು ಅದಕ್ಕೆ ತಕ್ಕನಾಗಿ ಕುಣಿಯುವ ಅಥವಾ ನೃತ್ಯ ಮಾಡುವ ಪಾತ್ರದಾರಿಗಳನ್ನು ಸಹ ಈಗಿನ ಬಯಲಾಟದಲ್ಲಿ ಕಂಡಿದ್ದೇನೆ. ಇದು ಮೂಲರೂಪದಲ್ಲಿರುವ ಬೈಲಾಟದ ಕುಣಿತ ಮತ್ತು ನೃತ್ಯಕ್ಕೆ ತದ್ವಿರುದ್ಧವೆಂದು ಭಾಸವಾಗುತ್ತದೆ. ಆದರೆ ಬದಲಾವಣೆ ಜಗದ ನಿಯಮ. ಈಗಿನ ತಂತ್ರಜ್ಞಾನವನ್ನು, ವೈಜ್ಞಾನಿಕತೆಯನ್ನು ಮತ್ತು ಪ್ರಸ್ತುತ ಜನರ ಜೀವನವಿಧಾನವನ್ನು ಸಹ ಬಯಲಾಟದಲ್ಲಿ ಅಳವಡಿಸಿಕೊಂಡಿರುವ ರೀತಿಯಲ್ಲಿ ಕಂಡುಬರುತ್ತದೆ.

**ಬಯಲಾಟದ ಸಂಗೀತ:**

ಬಯಲಾಟದಲ್ಲಿ ಮೃದಂಗ, ತಮಟೆ, ತಾಳ, ಮುಖವೀಣೆ, ಹಾರ್ಮೋನಿಯಂಗಳನ್ನು ಬಳಸುತ್ತಾರೆ. ಬಯಲಾಟದಲ್ಲಿ ಬಳಸುವ ವಾದ್ಯಗಳು ಆರ್ಭಟ ಪ್ರಧಾನವಾಗಿದ್ದು ವೀರರಸಕ್ಕೆ, ರೌದ್ರರಸಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿರುತ್ತವೆ. ಹಿಮ್ಮೇಳ ಬಹಳ ವೈವಿಧ್ಯಪೂರ್ಣವಾಗಿರುತ್ತದೆ. ರಂಗಮಂಟಪದ ಬಲಭಾಗದಲ್ಲಿ ಮೊದಲೆಲ್ಲ ಕುಳಿತುಕೊಳ್ಳುತ್ತಿದ್ದರು. ಆದರೆ ಇತ್ತೀಚಿಗೆ ಕೆಲವು ರಂಗಮಂಟಪದ ಮುಂಭಾಗದಲ್ಲಿ ಸ್ವಲ್ಪ ಕೆಳಮಟ್ಟದಲ್ಲಿ ಕುಳಿತುಕೊಂಡು ಅಭಿನಯಕ್ಕೆ ತಕ್ಕನಾದ ತಾಳಗಳನ್ನು ಮತ್ತು ವಾದ್ಯಗಳನ್ನು ನುಡಿಸುತ್ತಾ ಪಾತ್ರಧಾಳಿಗೆ ಉತ್ಸಾಹ, ಉಮ್ಮಸ್ಸು

ತುಂಬುವಂತ ರೀತಿಯಲ್ಲಿ ಕಂಡು ಬರುತ್ತದೆ. ಅದರಲ್ಲೂ ಇತ್ತೀಚಿಗೆ ಕ್ಯಾಶಿಯೋ ಮತ್ತು ರಿದಂಪ್ಯಾಡ್ ಗಳನ್ನು ಹೆಚ್ಚು ಬಳಕೆಗೆ ತಂದಿದ್ದು, ವಿಶೇಷವಾದ ಸಂಗೀತದ ಎಫೆಕ್ಟ್ ನೀಡುವಂತಿದ್ದು, ಮೂಲದಲ್ಲಿದ್ದ ಸಂಗೀತ ಪದ್ಧತಿ ಮತ್ತು ತಾಳದ ಪದ್ಧತಿಯು ಮರೆಮಾಚುವಂತೆ ಕಾಣುತ್ತಿದೆ. ಅದರಲ್ಲೂ ಒಮ್ಮೊಮ್ಮೆ ಈ ಕ್ಯಾಶಿಯೋ ಮತ್ತು ರಿದಂಪ್ಯಾಡುಗಳಿಂದ ಸಿನಿಮೀಯಾ ಸಂಗೀತ ಮತ್ತು ಸಿನಿಮಾ ರೀತಿಯಲ್ಲಿ ಸಂಗೀತದ ಎಫೆಕ್ಟ್ ಅಳವಡಿಸಿಕೊಂಡಿರುವುದು ನೋಡಬಹುದು.

**ಆಟದ ಪ್ರದರ್ಶನ:**

ಇತೀಚಿನ ಕೆಲವು ಬಯಲಾಟಗಳಲ್ಲಿ ಅಡ್ಡ ಪರದೆ ಇರುವುದು ಕೆಲವು ಕಡೆ ಕಂಡುಬರುತ್ತದೆ. ಇನ್ನು ಕೆಲವು ಕಡೆ ಅದು ತೆಗೆದಿರುವುದು ಕೂಡ ಇದೆ. ಆಟದ ಪ್ರಾರಂಭದಲಿ ಅಡ್ಡ ಪರದೆಯವನ್ನು ಮುಚ್ಚಿದ್ದು ಯಾವುದೇ ಒಳಗಿನ ಸನ್ನಿವೇಶಗಳು ಮತ್ತು ಪಾತ್ರಧಾರಿಗಳು ಕಾಣದಂತೆ ಮಾಡಿರುತ್ತಾರೆ. ನಿಂಬೆ ಹಣ್ಣುಗಳನ್ನು ಮತ್ತು ಬಾಳೆಹಣ್ಣಿನ ಗೊನೆಗಳನ್ನು ಕಟ್ಟಿ ಸಿಂಗರಿಸಿರುತ್ತಾರೆ. ಸಾರಥಿ ಪರದೆಗೆ ತೆಂಗಿನ ಕಾಯಿಯನ್ನು ನಿವಾಳಿಸಿ ಹೊಡೆದು ರಂಗ ಪರದೆಯನ್ನು ಸರಿಸುವುದರ ಮೂಲಕ ಬಯಲಾಟದ ಪ್ರದರ್ಶನ ಪ್ರಾರಂಭವಾಗುತ್ತದೆ. ಇತ್ತೀಚಿಗೆ ಆ ಮಟ್ಟದ ಒಂದು ಸಂಪ್ರದಾಯಗಳು, ರೀತಿ ನೀತಿಗಳು ಕಂಡುಬರುವುದು ವಿರಳ. ವೈಜ್ಞಾನಿಕತೆಯಿಂದ ಕೂಡಿದಂತಹ ಒಂದು ರಂಗಮಂಟಪ ನಿರ್ಮಿಸಿದ್ದು ಮತ್ತು ರಾಜಕೀಯ ವ್ಯಕ್ತಿಗಳು ಬಂದಾಗ ಒಮ್ಮೊಮ್ಮೆ ಬಯಲಾಟವನ್ನು ಮಧ್ಯದಲ್ಲಿ ನಿಲ್ಲಿಸುವಂತಹ ಕ್ರಮಗಳು ಮತ್ತು ಸ್ಟೇಜ್ ನ ಮೇಲೆ ಫೋಟೋ ತೆಗೆಸುವಂತಹ ಕಾರ್ಯಗಳು ನಡೆಯುವುದರಿಂದ ಪ್ರೇಕ್ಷಕರಿಗೆ ನಾಟಕದ ಮಧ್ಯದಲ್ಲಿ ರಸಭಂಗವಾಗುವುದುಂಟು. ಬಯಲಾಟ ಎನ್ನುವುದು ಜನಪದರ ಮೂಲ ಕಲೆ ಅದನ್ನು ಉಳಿಸಿ ಬೆಳಸುವಂತ ಮಾರ್ಪಾಡುಗಳು ಬರಲಿ ಆದರೆ ನಶಿಸುವಂತ ಮಾರ್ಪಾಡುಗಳು ಬರದಿರಲಿ ಎನ್ನುವುದು ನನ್ನ ಅಭಿಪ್ರಾಯ.

**ಉಪಸಂಹಾರ:**

ಜನಪದ ರಂಗಭೂಮಿಯಲ್ಲಿ ಪ್ರಸಿದ್ಧಿ ಪಡೆದಿರುವಂತಹ ಈ ಬಯಲಾಟವು ಈಗ ಅತ್ಯಂತ ಕ್ಷೀಣವಾದ ಸ್ಥಿತಿಯಲ್ಲಿದೆ, ಈ ಸಮಯದಲ್ಲಿ ಇದನ್ನು ಶಿಕ್ಷಣಕ್ಕೆ ಅಳವಡಿಸುವುದರಿಂದ ಇದರಲ್ಲಿರುವಂತಹ ಕೆಲವು ಗುಣಗಳನ್ನು ನಾವು ಶಿಕ್ಷಣ ಕಲಿಯುತ್ತಿರುವಂತಹ ಮಕ್ಕಳಲ್ಲಿ ಅಳವಡಿಸಿ ಅವರ ಜ್ಞಾನ ವೃದ್ಧಿ ಮತ್ತು ವ್ಯಕ್ತಿತ್ವದ ವಿಕಾಸನಕ್ಕೆ ಹಾಗು ಮಕ್ಕಳಲ್ಲಿ ಚುರುಕುತನ ಬೆಳೆಸುವುದು ಈ ಒಂದು ಬಯಲಾಟ ಲೇಖನದ ಮುಖ್ಯ ಉದ್ದೇಶವಾಗಿರುತ್ತದೆ. ಸಾಂಸ್ಕೃತಿಕವಾಗಿ ತೊಡಗಿಕೊಂಡು

ಅವರ ಪರಿಪೂರ್ಣ ವ್ಯಕ್ತಿತ್ವ ನಿರ್ಮಾಣಕ್ಕೆ ಈ ಒಂದು ಬಯಲಾಟವು ಸಹ ಅತ್ಯಂತ ಮಹತ್ವದ ಸ್ಥಾನವಹಿಸುವುದೆಂದು ತಿಳಿಸಲಾಗಿದೆ. ಅನಕ್ಷರಸ್ಥರು ಬಯಲಾಟದಲ್ಲಿ ತಲ್ಲೀನರಾಗಿ ಬಯಲಾಟ ಕಲಿಯುವುದರ ಮೂಲಕ ಸಂಸ್ಕೃತಿಯ ಅರಿವನ್ನು ಮೂಡಿಸಿಕೊಳ್ಳುತ್ತಿದ್ದು, ಶಿಕ್ಷಣದಲ್ಲಿ ಇದನ್ನು ಅಳವಡಿಸುವುದರಿಂದ ನಮ್ಮ ಸಂಪ್ರದಾಯ, ನಮ್ಮ ಆಚಾರ ವಿಚಾರಗಳು, ಮಾನವೀಯ ಮೌಲ್ಯಗಳು ಮತ್ತು ನಮ್ಮ ಸಂಸ್ಕೃತಿಯಲ್ಲಿ ಬರುವಂತಹ ಪ್ರಮುಖವಾದ ವಿಷಯಗಳ ಬಗ್ಗೆ ತಿಳಿಯಲು ಅನುಕೂಲವಾಗುತ್ತದೆ.

**ಪರಾಮರ್ಶನ ಗ್ರಂಥಗಳು:**


1. ರಾಮಚಂದ್ರೇಗೌಡ ಹಿ. ಶಿ. (1998). ಜಾನಪದ: ಸಾಂಸ್ಕೃತಿಕ ಆಯಾಮಗಳು. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು.
2. ಆರಡಿಮಲ್ಲಯ್ಯ ಕಟ್ಟೇರ. (2021). ಸೈಂಧವ ಸಂಕಥನ. ಪಲ್ಲವ ಪ್ರಕಾಶನ. ಬಳ್ಳಾರಿ.
3. ಶಿವರಾಮ ಕಾರಂತ ಕೆ. (2007). ಯಕ್ಷಗಾನ ಬಯಲಾಟ. ರವೀಂದ್ರ ಪುಸ್ತಕಾಲಯ. ಬೆಂಗಳೂರು.
4. ಚಕ್ಕೆರೆ ಶಿವಶಂಕರ್. (2018). ಕರ್ನಾಟಕ ಜನಪದ ರಂಗಭೂಮಿ. ಕರ್ನಾಟಕ ಜಾನಪದ ಪರಿಷತ್ತು. ಬೆಂಗಳೂರು.
5. ಬೋರಲಿಂಗಯ್ಯ ಹಿ. ಚಿ. (2002). ಕರ್ನಾಟಕದ ಜನಪದ ಕಲೆಗಳ ಕೋಶ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
6. ಶ್ರೀರಾಮ ಇಟ್ಟಣ್ಣವರ. (2019). ಬಯಲಾಟದ ಲೇಖನಗಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.